# ಬೇಬಿ ಡಾಲ್ ಕುಖ್ಯಾತಿ

ಅಂತರರಾಷ್ಟ್ರೀಯ ಖ್ಯಾತಿ ಹೊಂದಿರುವ ಬಾಲಿವುಡ್ ಗಾಯಕಿ ಕನಿಕಾ ಕಪೂರ್ ಈಗ ತಪ್ಪು ಕೆಲಸದಿಂದ ಸುದ್ದಿಯಲ್ಲಿದ್ದಾಳೆ. ಆಕೆಯೀಗ ಕೊರೊನಾ ವೈರಸ್ ಬಾಧಿತೆ. ಮೂರು ಸಲ ತಪಾಸಣೆ ಮಾಡಿದಾಗಲೂ ಪಾಸಿಟಿವ್ ವರದಿ ಬಂದಿದೆ. ಲಖನೌನ ಸಂಜಯ್‌ಗಾಂಧಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಳೆ. ಈ ಮಧ್ಯೆ ಲಖನೌ ಪೊಲೀಸರು ಐಪಿಸಿ ಸೆಕ್ಷನ್‌ಗಳ ಪ್ರಕಾರ ಆಕೆಯ ವಿರುದ್ಧ ಎಫ್‌ಐಆರ್ ಕೂಡಾ ದಾಖಲಿಸಿದ್ದಾರೆ. ನಿರ್ಲಕ್ಷ್ಯದ ನಡವಳಿಕೆಯಿಂದ ಹಲವರಿಗೆ 'ಕೋವಿಡ್ 19' ವೈರಸ್ ಹರಡಲು ಕಾರಣಳಾಗಿದ್ದಾಳೆ ಎನ್ನುವುದು ಆಕೆಯ ವಿರುದ್ಧದ ಆರೋಪ.

ಲಂಡನ್ನಿನಲ್ಲಿದ್ದ ಆಕೆ ಮಾರ್ಚ್ 9ರಂದು ಹುಟ್ಟೂರು ಲಖನೌಗೆ ಬಂದಿಳಿದ್ದಾಳೆ. ಅದಾಗಲೇ ಲಂಡನ್ ಮತ್ತು ಭಾರತದಲ್ಲಿ ಕೊರೊನಾ ವೈರಸ್ ಕಾಟ ಶುರುವಾಗಿತ್ತು. ಹಲವರು ಆಸ್ಪತ್ರೆ ಸೇರಿದ್ದರು. ವಿದೇಶದಿಂದ ಬಂದವರು ಮನೆಯಲ್ಲೇ 14 ದಿನಗಳ ಕಾಲ ಏಕಾಂತವಾಸ ಅನುಭವಿಸಬೇಕು ಎನ್ನುವುದು ಕೇಂದ್ರ ಸರ್ಕಾರದ ಆರೋಗ್ಯ ಇಲಾಖೆಯ ಕಟ್ಟಪ್ಪಣೆ. ಕನಿಕಾಗೂ ಈ ಸೂಚನೆ ನೀಡಲಾಗಿದೆ. ಆದರೆ ಆಕೆ ಅದನ್ನು ಗಂಭೀರವಾಗಿ ಪರಿಗಣಿಸಿಲ್ಲ.



ಲಖನೌ ನಗರದ ತಾಜ್ ಹೋಟೆಲ್‌ನಲ್ಲಿ ಕನಿಕಾ ಭಾಗವಹಿಸಿದ್ದ ಪಾರ್ಟಿ ಗಣ್ಯರಿಂದ ತುಂಬಿತ್ತು. ಸಂಸದರು, ಶಾಸಕರು, ಸಚಿವರು, ಉನ್ನತ ಅಧಿಕಾರಿಗಳು ಹಾಜರಿದ್ದರು. ಈಗ ಕನಿಕಾಳ 'ಕೋವಿಡ್ 19' ಸೋಂಕಿನಿಂದಾಗಿ ಪಾರ್ಟಿಯಲ್ಲಿ ಭಾಗವಹಿಸಿದ್ದ ಗಣ್ಯರೆಲ್ಲ ಕಂಗಾಲಾಗಿದ್ದಾರೆ. ಹಲವರು ವೈದ್ಯಕೀಯ ತಪಾಸಣೆಗೆ ಒಳಗಾಗಿದ್ದಾರೆ. ಪಾರ್ಟಿಯಲ್ಲಿ ಭಾಗವಹಿಸಿದ್ದ ರಾಜಸ್ತಾನದ ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೇ ಮತ್ತು ಅವರ ಮಗ, ಸಂಸದ ದುಷ್ಯಂತ್ ಸಿಂಗ್ ಇಬ್ಬರ ತಪಾಸಣೆಯ ವರದಿಯೂ ನೆಗೆಟಿವ್ ಬಂದಿದೆ. ಈ ಮಧ್ಯೆ ವಿಷಯ ಗೊತ್ತಿಲ್ಲದೆ ದುಷ್ಯಂತ್ ಹೋಗಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರನ್ನು ಭೇಟಿಯಾಗಿದ್ದಾರೆ. ಅವರು ಬಳಿಕ ತಮ್ಮ ಎಲ್ಲ ಕಾರ್ಯಕ್ರಮಗಳನ್ನು ರದ್ದು ಮಾಡಿದ್ದಾರೆ. ದುಷ್ಯಂತ್ ಸಂಸತ್ ಕಲಾಪದಲ್ಲೂ ಭಾಗವಹಿಸಿದ್ದರು. ಈ ಪಾರ್ಟಿಯಲ್ಲಿ ಉತ್ತರಪ್ರದೇಶದ ಆರೋಗ್ಯ ಸಚಿವರೂ ಇದ್ದರು.

ಆರಂಭದಲ್ಲಿ ಪೊಲೀಸರು ಈ ಬಗ್ಗೆ ದೂರು ನೀಡಿದಾಗ, 'ನಾನು ಯಾವ ಪಾರ್ಟಿಯಲ್ಲೂ ಭಾಗವಹಿಸಿಲ್ಲ. ಕುಟುಂಬದ ಒಂದು ಸಣ್ಣ ಫಂಕ್ಷನ್‌ನಲ್ಲಷ್ಟೇ ಭಾಗವಹಿಸಿದ್ದೇನೆ' ಎಂದಿದ್ದಳು ಕನಿಕಾ. ಆದರೆ ಆಕೆ ಭಾಗವಹಿಸಿದ ಪಾರ್ಟಿಗಳ ಫೋಟೊಗಳು ಜಾಲತಾಣಗಳಲ್ಲಿ ಬಂದು ಬಿದ್ದಾಗ ಸುಮ್ಮನಾದಳು. ಆಕೆ ಲಖನೌನಲ್ಲಿ ಮೂರು, ಕಾನ್ಪುರದಲ್ಲಿ ಒಂದು ಪಾರ್ಟಿಯಲ್ಲಿ ಭಾಗವಹಿಸಿದ್ದಲ್ಲದೆ ಲಖನೌನಲ್ಲಿ ಎರಡು ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸಿದ್ದೂ ಖಚಿತವಾಗಿದೆ.

ಹೋಟೆಲ್ ತಾಜ್‌ನಲ್ಲಿ ಆಕೆಯ ಜೊತೆಗೆ ಎರಡು ದಿನ ಉಳಿದುಕೊಂಡಿದ್ದ ಗೆಳೆಯ ಓಜಸ್ ದೇಸಾಯಿ ಭೂಗತನಾಗಿದ್ದ. ಬಳಿಕ ಪತ್ತೆಹಚ್ಚಿ ಆರೋಗ್ಯ ತಪಾಸಣೆ ಮಾಡಿದಾಗ ನೆಗೆಟಿವ್ ಬಂದಿದೆ.

'ಕೋವಿಡ್–19'ಕ್ಕೆ ಚಿಕಿತ್ಸೆ ಪಡೆಯುತ್ತಿರುವ ಸರ್ಕಾರಿ ಆಸ್ಪತ್ರೆಯಲ್ಲೂ ಆಕೆ ಕಿರಿಕ್ ಮಾಡಿರುವುದು ಸುದ್ದಿಯಾಯಿತು. ಅಲ್ಲಿ ಸೌಲಭ್ಯಗಳು ಸರಿಯಿಲ್ಲ ಎನ್ನುವುದು ಆಕೆಯ ಆಕ್ಷೇಪ. 'ಎಲ್ಲವೂ ಸರಿಯಿದೆ. ಆದರೆ ಇಲ್ಲಿ ಸ್ಟಾರ್ ತರಹ ವರ್ತಿಸಬೇಡ. ಎಲ್ಲರಂತೆ ಇಲ್ಲಿ ನೀವೂ ಒಬ್ಬ ರೋಗಿ' ಎಂದು ವೈದ್ಯರು ದಬಾಯಿಸಿದ ಬಳಿಕ ಸುಮ್ಮನಾದಳು. ಭಾರತಕ್ಕೆ ಬಂದ ಬಳಿಕ ಒಟ್ಟು 300 ಜನರನ್ನು ಈಕೆ ಸಂಪರ್ಕಿಸಿದ್ದು ಅವರಲ್ಲಿ 63 ಜನರ ವೈರಸ್ ತಪಾಸಣೆ ನೆಗೆಟಿವ್ ಬಂದಿದೆ. ಉಳಿದವರ ಬಗ್ಗೆ ಮಾಹಿತಿ ಇಲ್ಲ.

ಈ ಮಧ್ಯೆ ಲಂಡನ್ನಿನಲ್ಲಿ ಪ್ರಿನ್ಸ್ ಚಾರ್ಲ್ಸ್‌ಗೂ 'ಕೋವಿಡ್–19' ವೈರಸ್ ತಪಾಸಣೆ ಪಾಸಿಟಿವ್ ಬಂದಿದ್ದು ಅರಮನೆಯಲ್ಲಿ ಆತಂಕ ಉಂಟಾಗಿದೆ. ಪ್ರಿನ್ಸ್ ಚಾರ್ಲ್ಸ್‌ಗೆ ವೈರಸ್ ಕನಿಕಾಳಿಂದಲೇ ಹಬ್ಬಿದೆ ಎನ್ನುವ ಗಾಳಿಸುದ್ದಿ ಹರಡಿದೆ. ಆಕೆ ಪ್ರಿನ್ಸ್ ಜೊತೆಗಿರುವ ಫೋಟೊಗಳನ್ನು ಕೆಲವರು ಹರಿಬಿಟ್ಟಿದ್ದಾರೆ. ಆದರೆ ಇದು ಫೇಕ್ ಸುದ್ದಿ. ಈಕೆ ಪ್ರಿನ್ಸ್ ಜೊತೆಗೆ ಭೇಟಿಯಾದದ್ದು 2014 ಮತ್ತು 15ರಲ್ಲಿ ಎನ್ನುವುದು ದೃಢಪಟ್ಟಿದೆ. 2015ರಲ್ಲಿ ಬಕಿಂಗ್‌ಹ್ಯಾಂ ಅರಮನೆಯಲ್ಲೇ ಈಕೆಯ ಸಂಗೀತ ರಸಸಂಜೆ ಏರ್ಪಾಡಾಗಿತ್ತು.

ಬಾಲ್ಯದಲ್ಲೇ ಗಾಯಕಿ ಆಗಬೇಕೆಂಬ ಆಸೆಯಿದ್ದವಳು ಕನಿಕಾ. 1997ರಲ್ಲಿ ಅನಿವಾಸಿ ಉದ್ಯಮಿ ರಾಜ್ ಚಂದೊಕ್ ಜೊತೆಗೆ ಮದುವೆ ಆದ ಬಳಿಕ ಲಂಡನ್ನಿಗೆ ಪಯಣ. ಹಾಡುವ ಬಯಕೆಗೆ ಬ್ರೇಕ್. 15 ವರ್ಷದ ದಾಂಪತ್ಯದಲ್ಲಿ ಮೂರು ಮಕ್ಕಳನ್ನು ಹೆತ್ತಳು. ಆದರೆ 2012ರಲ್ಲಿ ಗಂಡನಿಂದ ವಿಚ್ಛೇದನ ಪಡೆದು, ಮುಂಬೈಗೆ ಬಂದು ಗಾಯಕಿಯಾದಳು. 2012ರಲ್ಲಿ 'ಜುಗ್ನಿ ಜಿ' ಮ್ಯೂಸಿಕ್ ವಿಡಿಯೊ ಹಿಟ್ ಆಯಿತು. 2014ರಲ್ಲಿ 'ರಾಗಿಣಿ ಎಂಎಂಎಸ್ 2' ಸಿನಿಮಾದಲ್ಲಿ ಅವಕಾಶ ಸಿಕ್ಕು ಅದರಲ್ಲಿ ಹಾಡಿದ 'ಬೇಬಿ ಡಾಲ್' ಹಾಡು ಖ್ಯಾತಿಯ ತುದಿಗೇರಿಸಿತು. ಫಿಲಂಫೇರ್ ಅತ್ಯುತ್ತಮ ಗಾಯಕಿ ಪ್ರಶಸ್ತಿಯೂ ಸಿಕ್ಕಿತು.

ಆ ಬಳಿಕ ಆಕೆ ಹಿಂದೆ ನೋಡಲಿಲ್ಲ. 'ಹ್ಯಾಪಿ ನ್ಯೂ ಇಯರ್' ಚಿತ್ರದ ಲವ್ಲೀ ಮತ್ತು ಕಮ್ಲೀ ಹಾಡು; 2015ರಲ್ಲಿ 'ರಾಯ್' ಸಿನಿಮಾಕ್ಕೆ ಹಾಡಿದ 'ಚಿಟ್ಟಿಯಾ ಕಲೈಯಾ...' ಹಾಡುಗಳು ಈಗಲೂ ಜನಪ್ರಿಯ. 'ಆಲ್ ಈಸ್ ವೆಲ್', 'ಹೇಟ್ ಸ್ಟೋರಿ 3', 'ದಿಲ್‌ವಾಲೆ' ಸಿನಿಮಾದ ಹಾಡುಗಳು ಭಾರೀ ಜನಪ್ರಿಯ. 'ಉಡ್ತಾ ಪಂಜಾಬ್'ನ 'ದಾ ದಾ ದಸ್ಸೆ' ಸೂಪರ್‌ಹಿಟ್. ಐಫಾ, ಮಿರ್ಚಿ ಮ್ಯೂಸಿಕ್, ಸ್ಕ್ರೀನ್, ಸ್ಟಾರ್‌ಡಸ್ಟ್, ಗ್ಲೋಬಲ್ ಇಂಡಿಯನ್ ಮ್ಯೂಸಿಕ್ ಹೀಗೆ ಪ್ರತಿವರ್ಷವೂ ಹತ್ತಾರು ಪ್ರಶಸ್ತಿಗಳು ದೊರಕುತ್ತಿವೆ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65